ಸಣ್ಣ ಹಿಡುವಳಿದಾರರ ಹಿತಕ್ಕೆ ತಾವು ಏನು ಮಾಡುತ್ತೀರಿ ? ಇದನ್ನು ಕೂಲಂಕಷವಾಗಿ ವಿಚಾರ ಮಾಡಿ, ಪರಿಹಾರ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI M. RAJASHEKHARA MURTHY: The suggestion of Hon. member is noted.

## ಸಹಕಾರಿ ಕ್ಷೇತ್ರದಲ್ಲಿರುವ ಗಿರಣಿಗಳು ಹಾಗೂ ಕೈಗಾರಿಕೆಗಳು

**456.** ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಕಾರಿ ಸಂಸ್ಥೆಗಳಡಿಯಲ್ಲಿ ಬರುವ ಸಹಕಾರಿ ಹತ್ತಿ ನೂಲಿನ ಗಿರಣಿ, ಸಕ್ಕರೆ ಕಾರ್ಖಾನೆ, ಆಯಿಲ್ ಇಂಡಸ್ಟ್ರೀಸ್ (ಎಣ್ಣೆಕಾಳುಗಳ ಸಹಕಾರ ಸಂಘ) ಇವುಗಳನ್ನು ಮಂಜೂರು ಮಾಡಿದ ಸಂಖ್ಯೆಯೆಷ್ಟು, ಮತ್ತೆ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಆ) ವಿಶ್ವಬ್ಯಾಂಕಿನ ನೆರವಿನಿಂದ ಎನ್.ಸಿಡಿಸಿಗೆ ನಾಲ್ಕನೆ ಯೋಜನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಮಂಜೂರು ಆದ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

ಇ) ಈ ಯೋಜನೆಯಡಿಯಲ್ಲಿ ಮಂಜೂರಾದ ಕಾರ್ಖಾನೆಗಳ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ) ಸಹಕಾರಿ ಸಂಸ್ಥೆಗಳಡಿಯಲ್ಲಿ ಈ ಕೆಳಕಂಡ ನೂಲಿನ ಗಿರಣಿ, ಸಕ್ಕರೆ ಕಾರ್ಖಾನೆ ಮತ್ತು ಆಯಿಲ್ ಇಂಡಸ್ಟ್ರೀಸ್‌ಗಳನ್ನು ಮಂಜೂರು ಮಾಡಿದೆ.

1) ನೂಲಿನ ಗಿರಣಿ: 12 ಗಿರಣಿಗಳಿಗೆ ಮಂಜೂರಾತಿ ನೀಡಿದೆ. ಇದರಲ್ಲಿ 8 ನೂಲಿನ ಗಿರಣಿಗಳು ಪೂರ್ಣ ರೀತಿಯಲ್ಲಿ ಉತ್ಪಾದನೆ ಪ್ರಾರಂಭಿಸಿವೆ. ಮೂರು ನೂಲಿನ ಗಿರಣಿಗಳು ಭಾಗಶಃ ಉತ್ಪಾದನೆ ಪ್ರಾರಂಭಿಸಿವೆ. 1ನೂಲಿನ ಗಿರಣಿ ಪ್ರಾರಂಭಿಸಬೇಕಾಗಿದ್ದು ಮಾರ್ಚ್ 1993ರ ಒಳಗಾಗಿ ಪ್ರಾರಂಭಿಸುವ ನಿರೀಕ್ಷೆ ಇದೆ.

2) ಸಕ್ಕರೆ ಕಾರ್ಖಾನೆ: ಮಂಜೂರಾತಿ ನೀಡಿರುವುದು 17. ಇವುಗಳಲ್ಲಿ 16 ಕಾರ್ಖಾನೆಗಳು ಕಾರ್ಯಗತ ಮಾಡುತ್ತಿವೆ. 1 ಸಕ್ಕರೆ ಕಾರ್ಖಾನೆಯು ಸ್ಥಗಿತಗೊಂಡಿರುತ್ತದೆ.

3) ಆಯಿಲ್ ಇಂಡಸ್ಟ್ರೀಸ್: ಒಟ್ಟು ಇರುವುದು 336. ಈ ಪೈಕಿ 302 ಸಂಘಗಳು ಹಾಲಿ ಕಾರ್ಯ ನಿರ್ವಹಿಸುತ್ತಿದ್ದು 29 ಸಂಘಗಳು ಸ್ಥಗಿತಗೊಂಡಿರುತ್ತವೆ. 5 ಸಂಘಗಳನ್ನು ನವೆಂಬರ್ ತಿಂಗಳಲ್ಲಿ ನೋಂದಣಿ ಮಾಡಿರುವುದರಿಂದ ಅವುಗಳ ಕಾರ್ಯ ಜನವರಿ 1993ರಿಂದ ಪ್ರಾರಂಭಿಸಲಾಗುವುದು.

ಆ) ವಿಶ್ವ ಬ್ಯಾಂಕಿನ ನೆರವಿನಿಂದ ಎನ್.ಸಿಡಿಸಿಗೆ ನಾಲ್ಕನೇ ಯೋಜನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಇನ್ನೂ ಯಾವ ಸಹಕಾರಿ ನೂಲಿನ ಗಿರಣಿಗಳನ್ನು ಮಂಜೂರು ಮಾಡಿರುವುದಿಲ್ಲ. ರಾಜ್ಯ ಸರ್ಕಾರವು ಮೂರು ನೂಲಿನ ಗಿರಣಿಗಳನ್ನು ಎನ್.ಸಿ.ಡಿ.ಸಿ. ನಾಲ್ಕನೆ ಯೋಜನೆಯಲ್ಲಿ ಪ್ರಾರಂಭಿಸಲು ಪ್ರಸ್ತಾವನೆಗಳನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದವರಿಗೆ ಶಿಫಾರಸ್ಸು ಮಾಡಿ ಕಳುಹಿಸಿರುತ್ತಾರೆ.

ಇ) ಮೇಲಿನ (ಆ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಪಿ.ಸಿ. ಸಿದ್ದನಗೌಡರ್:– ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಹಕಾರ ಸಚಿವರು ಉತ್ತರ ಆಗಿದೆ ಎಂದು ಹೇಳಿದರು. ಕೋ ಆಪರೇಟೀವ್ ಸೆಕ್ಟರ್‌ನಲ್ಲಿ ಆಯಿಲ್ ಇಂಡಸ್ಟ್ರೀಸ್ ಆಗಲೀ,

ಶುಗರ್ ಫ್ಯಾಕ್ಟರೀಸ್ ಆಗಲಿ, ಕಾಟನ್ ಇಂಡಸ್ಟ್ರೀಸ್ ಆಗಲೀ ಎನ್.ಸಿ.ಡಿ.ಸಿ ಯಿಂದ ನಮ್ಮ ಸ್ಟೇಟ್‌ನಲ್ಲಿ ಬರತಕ್ಕಂಥದಕ್ಕೆ ಕಂಪಾರಿಟೀವ್ ಆಗಿ ಬೇರೆ ರಾಜ್ಯಗಳದ್ದನ್ನು ಹೋಲಿಸಿ ನೋಡಿದರೆ, ಬೇರೆ ರಾಜ್ಯಗಳಲ್ಲಿ ವರ್ಲ್ಡ್ ಬ್ಯಾಂಕ್‌ನವರು 3–4 ಯೋಜನೆಗಳನ್ನು ಮಾಡುತ್ತಿದ್ದಾರೆ. ಆದರೆ ಸರಕಾರದವರು ಎನ್.ಸಿ.ಡಿ.ಸಿಯಿಂದ ಯಾವುದನ್ನೂ ಕೊಟ್ಟಿಲ್ಲ ಎಂದು ಮೇಲಿನ ಉತ್ತರದಲ್ಲಿ ತಿಳಿಸಿದ್ದಾರೆ. ನನಗೆ ತಿಳಿದ ಮಟ್ಟಿಗೆ ಹೇಳಬೇಕೆಂದರೆ ಎರಡು ಸ್ಪಿನ್ನಿಂಗ್ ಮಿಲ್‌ಗಳು ಅಂದರೆ ಹತ್ತಿ ನೂಲಿನ ಗಿರಣಿಗಳನ್ನು ಪ್ರಾರಂಭಿಸಬೇಕೆಂದು, ಎನ್.ಸಿ.ಡಿ.ಸಿ. ಮೂಲಕ ವರ್ಲ್ಡ್ ಬ್ಯಾಂಕ್‌ನವರು ಕೊಟ್ಟಿದ್ದಾರೆ, ಇದಕ್ಕೆ 33.75 ಪರ್‌ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಅದಕ್ಕಾಗಿ ತಾವು ದಯವಿಟ್ಟು ಎನ್.ಸಿ.ಡಿ.ಸಿ. ಯೋಜನೆಯಿಂದ ವರ್ಲ್ಡ್ ಬ್ಯಾಂಕ್ ಮುಖಾಂತರ ತೀವ್ರಗತಿಯಲ್ಲಿ ಇದನ್ನು ತೆಗೆದುಕೊಳ್ಳಬೇಕು, ಹುಬ್ಬಳ್ಳಿಯ ಸಂಜಯ ಸಹಕಾರ ನೂಲಿನ ಗಿರಣಿಯನ್ನು 86ರಲ್ಲೇ ಪ್ರಾರಂಭ ಮಾಡಬೇಕೆಂದು ಕ್ಯಾಬಿನೆಟ್ ಡಿಸಿಷನ್ ಕೂಡ ಆಗಿದೆ, ಅನೇಕ ಶುಗರ್ ಫ್ಯಾಕ್ಟರಿಗಳನ್ನೂ ಸಹ ಪ್ರಾರಂಭ ಮಾಡಲು ರೈತರುಗಳು ಸೇರಿ ಕಾಂಟ್ರಿಬ್ಯೂಷನ್ ಮಾಡಿ ಸರಕಾರದ ಪಾಲನ್ನು ಕೊಡಬೇಕೆಂದು ಕೇಳಿದ್ದಾರೆ. ಅದಕ್ಕಾಗಿ ಮಾನ್ಯ ಸಚಿವರು ಈ ಒಂದು ನೂಲಿನ ಗಿರಣಿಯನ್ನು ಪ್ರಾರಂಭ ಮಾಡುವುದಕ್ಕೆ ಯಾವ ಹಂತದಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ, ಯಾವಾಗ ಮಾಡುತ್ತೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ಪ್ರಶ್ನೆಗೆ ಉತ್ತರ ಅವರೇ ಹೇಳಿಕೊಂಡು ಬಿಟ್ಟಿದ್ದಾರೆ. ಎನ್.ಸಿ.ಡಿ.ಸಿ.ಗೆ ಸುಮಾರು ಮೂರು ನೂಲಿನ ಗಿರಣಿಗಳಿಗೆ ಸಂಬಂಧಪಟ್ಟಂತೆ ರೆಕ್ಕಡೇಶನ್ ಹೋಗಿದೆ. ಬಹಳ ವರ್ಷದಿಂದ ತಾವು ಪ್ರಯತ್ನ ಮಾಡುತ್ತಿದ್ದೀರಿ. ಬಹುಶಃ ಜಮೀನನ್ನು ನಾವು ಕೊಡುವ ಪ್ರಯತ್ನ ಮಾಡಿದ್ದೇವೆ ಎಂದು ತಮಗೆ ಗೊತ್ತಿರಬಹುದು. ಇವತ್ತು ಏನಾಗಿದೆ ಎಂದರೆ ಮೂರೂ ಕೇಸಸ್ ಎನ್.ಸಿ.ಡಿ.ಸಿ.ಯಲ್ಲಿ ಪೆಂಡಿಂಗ್ ಇದೆ. ಅದರ ಬಗ್ಗೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಇದೊಂದೇ ಅಲ್ಲ ಇವತ್ತು ಮೂರು ಶುಗರ್ ಫ್ಯಾಕ್ಟರೀಸ್‌ಗೆ ಸಹ ರೆಕಮೆಂಡ್ ಆಗಿ ಹೋಗಿದೆ. ಅದೂ ಕೂಡಾ ಪೆಂಡಿಂಗ್ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿ ನಾನು ಅವರಿಂದ ಪತ್ರ ಬರೆಯಿಸಿ ಆದಷ್ಟು ಒತ್ತಾಯ ತರತಕ್ಕಂಥ ಪ್ರಯತ್ನ ಮಾಡುತ್ತೇನೆ. ನೀವು ನಾವು ಪ್ರಯತ್ನ ಮಾಡಿ ಇದನ್ನು ತರಿಸಿಕೊಂಡು ಬೇಗನೆ ಅದಕ್ಕೆ ಸ್ಯಾಂಕ್ಷನ್ ಕೊಡಿಸತಕ್ಕಂಥ ಪ್ರಯತ್ನ ಮಾಡೋಣ.

ಶ್ರೀ ಪಿ.ಸಿ. ಸಿದ್ದನಗೌಡರ್:– ಈ ಸೆಂಟ್ರಲ್ ಗೌರ್ನಮೆಂಟ್‌ನವರು ಕೋ ಆಪರೇಟೀವ್ ಅಮೆಂಡ್‌ಮೆಂಟ್ ಬಿಲ್ ಈಗಾಗಲೇ ಪಾಸ್ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಎನ್.ಸಿ.ಡಿ.ಸಿ.ದು ವರ್ಲ್ಡ್ ಬ್ಯಾಂಕ್‌ದು ಏತಕ್ಕೆ ಲೇಟಾಗುತ್ತದೆ ಎಂದರೆ, ವರ್ಲ್ಡ್ ಬ್ಯಾಂಕ್‌ನವರು ಕೆಲವು ಕಂಡೀಷನ್ಸ್ ಹಾಕಿದ್ದಾರೆ ಎಂದು ಕಾಣುತ್ತದೆ. ಕೋ ಆಪರೇಟಿವ್ ಸೊಸೈಟೀಸ್‌ಗೆ ನಾಮಿನೇಷನ್ ಮಾಡಬಾರದೆಂದು ಒಂದು, ಎರಡನೆಯದಾಗಿ, ಈ ಇನ್‌ಸ್ಟಿಟ್ಯೂಷನ್ಸ್‌ನ ಸೂಪರ್‌ಸೀಡ್ ಮಾಡಬಾರದೆಂದು ಒಂದು. ಇದು ನಮ್ಮ ಕಾಲದಲ್ಲೂ ಆಗುತ್ತದೆ, ನಿಮ್ಮ ಕಾಲದಲ್ಲೂ ಆಗುತ್ತದೆ, ಪಾಲಿಟಿಕ್ಸ್ ನಾನು ಹೇಳುತ್ತಿಲ್ಲ. ಕಾಂಗ್ರೆಸ್ ಇರಬಹುದು, ಅಥವಾ ನಿಮ್ಮ ಪಕ್ಷ ಇರಬಹುದು. ನಾನು ತಮ್ಮಿಂದ ಅದನ್ನು ನಿರೀಕ್ಷೆ ಮಾಡುತ್ತಿಲ್ಲ. ಸರಕಾರ ಸೂಪರ್ ಸೀಡ್ ಮಾಡುವುದರಿಂದ ಈ ಇನ್‌ಸ್ಟಿಟ್ಯೂಷನ್ಸ್ ನಡೆಯುವುದಿಲ್ಲ ಎಂದು ವರ್ಲ್ಡ್ ಬ್ಯಾಂಕ್‌ನವರು ಫೈನಾನ್ಸ್ ಮಾಡುತ್ತಿಲ್ಲ. ಆ ರೀತಿ ಕಂಡೀಷನ್ಸ್ ಇದೆ ಎಂದು ಗೊತ್ತಾಗಿದೆ. ಅದಕ್ಕಾಗಿ ತಾವು ಈ ವಿಚಾರದ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನಾಮಿನೇಷನ್ ಮಾಡತಕ್ಕದ್ದು ಬೇರೆ ವಿಷಯ. ನಾಮಿನೇಷನ್ ಮಾಡುತ್ತೀರಿ, ಅದಕ್ಕೆ ನಾವು ಕೊಡುವುದಿಲ್ಲ ಎಂದು ಯಾರೂ ಹೇಳಲಿಲ್ಲ. ಈಗ ಸಿದ್ಧೇಶ್ವರ ಸಹಕಾರ ನೂಲಿನ ಗಿರಣಿ, ಸಂಜಯ ಗಾಂಧಿ ಸಹಕಾರ ನೂಲಿನ ಗಿರಣಿ ಮತ್ತು ಸಹ್ಯಾದ್ರಿ ಸಹಕಾರ ನೂಲಿನ ಗಿರಣಿ, ಈ ಮೂರೂ ಕೂಡಾ ಈಗಾಗಲೇ ನಾನು ಹೇಳಿದ ಹಾಗೆ ಎನ್.ಸಿ.ಡಿ.ಸಿ.ಗೆ ನಾವು ರೆಕಮೆಂಡ್

ಮಾಡಿ ಕಳುಹಿಸಿದ್ದೇವೆ. ಆದರೆ ವರ್ಲ್ಡ್ ಬ್ಯಾಂಕ್‌ನ 4ನೇ ಪ್ರಾಜೆಕ್ಟ್ ಇನ್ನೂ ಮಂಜೂರಾಗಿಲ್ಲ ಎಷ್ಟು ಕೊಡಬೇಕು, ಯಾರಿಗೆ ಕೊಡಬೇಕು ಎಂಬ ತೀರ್ಮಾನ ಅದು ತೆಗೆದುಕೊಂಡಿಲ್ಲ. ನಮ್ಮ ರೆಕಮೆಂಡೇಷನ್ ಈಗಾಗಲೇ ಅಲ್ಲಿ ಇದೆ, ಹಿಂದಿನ ಸರಕಾರ ಕೂಡಾ ಕಳಿಸಿದೆ. ಅದು ಅಲ್ಲಿ ಪೆಂಡಿಂಗ್ ಇದೆ. ಮೂರನೇ ಹಂತದಲ್ಲಿರತಕ್ಕಂಥ ಪ್ರಾಜೆಕ್ಟ್ಸ್ ಕೆಲವು ಕಂಪ್ಲೀಟ್ ಆಗುತ್ತಿವೆ. ನಾಲ್ಕನೇ ಹಂತದಲ್ಲಿ ತಮ್ಮ ಪ್ರಾಜೆಕ್ಟ್ ಇದೆ, ಅದು ವರ್ಲ್ಡ್ ಬ್ಯಾಂಕ್ ಮುಂದಿದೆ, ಅದಕ್ಕೆ ಬೇಗನೆ ಪ್ರಯತ್ನ ಮಾಡುತ್ತೇವೆ. ಈ ಕಂಡೀಷನ್ಸ್ ಎಂದು ಹೇಳಿದರಲ್ಲ, ವರ್ಲ್ಡ್ ಬ್ಯಾಂಕ್‌ನವರು ನೂರಾರು ಕಂಡೀಷನ್ಸ್ ಹಾಕಬಹುದು. ಆದರೆ ನಾವು ಅವರೂ ಕೂಡಿ ಕನ್‌ವಿನ್ಸ್ ಮಾಡಬೇಕಾಗುತ್ತದೆ. ಕೋಟ್ಯಾಂತರ ರೂಪಾಯಿ ಗೌರ್ನಮೆಂಟ್ ಹಣವನ್ನು ನಾವು ಒಂದೊಂದು ಇನ್‌ಸ್ಟಿಟ್ಯೂಷನ್ಸ್‌ಗೆ ಹಾಕುವಾಗ, ಗೌರ್ನಮೆಂಟ್ ಕಡೆಯಿಂದ ಒಂದೆರಡು ನಾಮಿನೇಷನ್ಸ್ ಕಾನೂನು ಪ್ರಕಾರ ಮಾಡಿದರೆ ತಪ್ಪೇನೂ ಆಗುವುದಿಲ್ಲ. ಇದನ್ನು ತಾವೂ ಕೂಡಾ ಒಪ್ಪಿಕೊಳ್ಳುತ್ತೀರಿ. ಇದೆಲ್ಲಾ ಕೂಡಾ ಅನೇಕ ಸಲ ಇಲ್ಲಿ ವಾದ ವಿವಾದ ಮಾಡಿ, ಇದಕ್ಕೆ ಅಮೆಂಡ್‌ಮೆಂಟ್ಸ್ ಸಹ 1984 ಮತ್ತು 1988ರಲ್ಲಿ ತಂದಿದ್ದೂ ಇದೆ. ಅದರಿಂದ ಇದಕ್ಕೆ ಅಡಚಣೆ ಬರುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದರು. ತಾವು ಮಾಡಿ ಸಂತೋಷ, ಅವರೂ ಮಾಡಿದ್ದಾರೆ, ಅದು ನನಗೆ ಗೊತ್ತಿದೆ. ಇದರಲ್ಲಿ ಪ್ರಶ್ನೆ ಏನಿದೆ ಎಂದರೆ, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ನಮ್ಮ ರಾಜ್ಯದ ರೈತರಿಗೆ ಎಷ್ಟರಮಟ್ಟಿಗೆ ಸಹಾಯ ಆಗಬೇಕಾಗಿತ್ತು, ಅಷ್ಟು ಆಗಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ವರ್ಲ್ಡ್ ಬ್ಯಾಂಕ್ ಹಾಗೂ ಎನ್.ಸಿ.ಡಿ.ಸಿ.ಯಿಂದ ನಿಜವಾಗಿ ಲಾಭ ತೆಗೆದುಕೊಂಡ ರಾಜ್ಯ ಎಂದರೆ ಮಹಾರಾಷ್ಟ್ರ. ಮಹಾರಾಷ್ಟ್ರದಲ್ಲಿ ಶುಗರ್ ಫ್ಯಾಕ್ಟರೀಸ್ ಆಗಲಿ, ಅಗ್ರಿಕಲ್ಚರ್ ಆಗಲೀ, ಹಾರ್ಟಿಕಲ್ಚರ್ ಆಗಲೀ, ಕಾಟನ್ ಮಿಲ್ಸ್ ಆಗಲೀ, ಒಂದೊಂದು ಸಲಕ್ಕೆ 15–20–30 ಸ್ಕ್ಯಾಂಕ್ಷನ್ ಮಾಡಿಸಿಕೊಂಡು ಬರುತ್ತಾರೆ. ಆದರೆ ನಮ್ಮ ರಾಜ್ಯಕ್ಕೆ ಎರಡು ಕೊಟ್ಟರೂ ಅದನ್ನು ಸ್ಕ್ಯಾಂಕ್ಷನ್ ಮಾಡಿಸಿಕೊಂಡು ಬರುವುದಿಲ್ಲ ಇದಕ್ಕೆ ನೀವು ಸರಿಯಾದ ಬಜೆಟ್ ಪ್ರಾವಿಜನ್ ಮಾಡಿಕೊಳ್ಳದೇ ಇರುವುದೇ ಕಾರಣ.

ಷೇರ್ ಕ್ಯಾಪಿಟಲ್ ಕೊಟ್ಟು ಸಿಕ್ ಇಂಡಸ್ಟ್ರಿ ಮಾಡಲು ಪ್ರಯತ್ನ ಮಾಡುತ್ತೀರೇ ವಿನಹ ಇಂಡಸ್ಟ್ರಿ ಚೆನ್ನಾಗಿ ನಡೆಸಬೇಕು ಎನ್ನುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಮೂಲತಃ ವರ್ಲ್ಡ್ ಬ್ಯಾಂಕ್‌ನಿಂದ ಬರುವ ಹಣ ರೈತರಿಗೆ ಸಹಾಯ ಆಗಬೇಕು. ಅದಕ್ಕೆ ನಮ್ಮ ಮುಂಗಡ ಪತ್ರದಲ್ಲಿ ಸಾಕಷ್ಟು ಹಣವನ್ನು ತಾವು ಬಜೆಟ್‌ನಲ್ಲಿ ಪ್ರೊವೈಡ್ ಮಾಡಬೇಕಾಗುತ್ತದೆ. ಆಗ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಇಂಡಸ್ಟ್ರೀಗಳು ನೂಲಿನ ಕಾರ್ಖಾನೆಗಳು ಬಂದರೆ ? ಕೃಷಿ ಮತ್ತು ತೋಟಗಾರಿಕೆಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ತಾವು ಪ್ರಯತ್ನ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನಾನು ತಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ. 32.5 ಪರ್ಸೆಂಟ್‌ನಲ್ಲಿ 16ಪರ್ಸೆಂಟ್‌ಗೆ ಮಾತ್ರ ನಮ್ಮದು. ಉಳಿದಿದ್ದು ಎನ್.ಸಿ.ಡಿ.ಸಿ.ಯವರು ಕೊಡುತ್ತಾರೆ. ಆ 16ಪರ್ಸೆಂಟ್‌ಗೆ ನಾವು ಬಜೆಟ್ ಪ್ರಾವಿಜನ್ ಮಾಡಿಕೊಳ್ಳದೆ ಹೋದರೆ ಮುಂದೆ ನಾವು ಲೋನ್ ಕೇಳುವುದಕ್ಕಾಗುವುದಿಲ್ಲ. ಪ್ರಾಜೆಕ್ಟ್‌ಗೆ ಅಪ್ರೂವಲ್ ಕೊಡಿ ಎಂದು ಕೇಳುವ ನೈತಿಕ ಹಕ್ಕು ಬರುವುದಿಲ್ಲ. ಅದಕ್ಕೆ ನಾನು ಈ ಸಂಬಂಧವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ತಮ್ಮಲ್ಲಿ ಹಾಗೂ ಕೋ-ಆಪರೇಟಿವ್ ಫೀಲ್ಡ್‌ನಲ್ಲಿ ಅನುಭವ ಇರತಕ್ಕ ಅನೇಕ ಮುಖಂಡರುಗಳು ಈ ಸದನದಲ್ಲಿದ್ದಾರೆ ಅವರ ಜೊತೆ ಸಹ ಮಾತನಾಡಿ ಯಾವ ರೀತಿಯಲ್ಲಿ ವರ್ಲ್ಡ್ ಬ್ಯಾಂಕ್‌ನಿಂದ ಬರುವ ಹಣದ ಲಾಭ ಪಡೆಯಬೇಕು ಎನ್ನುವ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೇಳಿದರು. ಸಹಕಾರ

ಸಂಸ್ಥೆಗಳಲ್ಲಿ ನಾಮಿನೇಶನ್ಸ್ ಮಾಡತಕ್ಕಂಥ ಪದ್ಧತಿಯನ್ನು ಜಾರಿಗೆ ಕೊಡುವ ಬಗ್ಗೆ ನಾವೂ ಮಾಡಿದ್ದೇವೆ, ನೀವೂ ಮಾಡಿದ್ದೀರಿ ಎಂದು. ಅದನ್ನು ನಾನು ಒಪ್ಪುತ್ತೇನೆ. ಆದರೆ ಎಲ್ಲಿ ಸರಕಾರದ ಷೇರು ಇದೆ ಅಂತಹ ಸಂಸ್ಥೆಗಳಲ್ಲಿ ನಾಮಿನೇಶನ್ಸ್ ಮಾಡಿ ಅದಕ್ಕೆ ನಮ್ಮದೇನು ಅಭ್ಯಂತರ ಇಲ್ಲ. ಆದರೆ ಎಲ್ಲಿ ಸರ್ಕಾರದ ಷೇರು ಇಲ್ಲ ಈಗ ಮಿಲ್ಕ್ ಕೋ ಆಪರೇಟಿವ್ ಸೊಸೈಟಿಗಳನ್ನು ತೆಗೆದುಕೊಳ್ಳಿ ಅಲ್ಲಿ ಸರ್ಕಾರದ ಷೇರು ಇಲ್ಲ ಅಂತಹ ಕಡೆಗಳಲ್ಲೂ ಕೂಡ ನಾಮಿನೇಶನ್ಸ್ ಮಾಡತಕ್ಕಂಥ ಪದ್ಧತಿ ಇದೆ. ಅದನ್ನು ನಿಲ್ಲಿಸತಕ್ಕಂಥ ಕೆಲಸ ಮಾಡುತ್ತೀರಾ ? ಒಂದು ವೇಳೆ ನಾಮಿನೇಶನ್ ಪದ್ಧತಿ ಜಾರಿಗೆ ಕೊಡುವುದಾದರೆ ಎಲ್ಲಿ ಸರ್ಕಾರದ ಷೇರು ಇಲ್ಲವೋ ಅಂತಹ ಸಂಸ್ಥೆ ಗಳಿಗೆ ಜಾರಿ ಮಾಡಬಾರದೆಂದು ನನ್ನ ಅನಿಸಿಕೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ಬಜೆಟ್ ಪ್ರಾವಿಷನ್ ನಮ್ಮಲ್ಲಿ ಇರುವುದಿಲ್ಲವೆಂದು, ಇದು ಬಹಳ ಮುಖ್ಯವಾಗಿದೆ. ನಮ್ಮಲ್ಲಿ ಏತಕ್ಕೆ ಸಹಕಾರ ಸಂಸ್ಥೆಗಳು ಬರುತ್ತಿಲ್ಲವೆಂದರೆ ಇದೇ ಕಾರಣಕ್ಕೆ. ಮಹಾರಾಷ್ಟ್ರದಲ್ಲಿ ಸಹಕಾರ ಸಂಸ್ಥೆಗಳು ಬಹಳ ಮುಂದೆ ಹೋಗಿವೆ. ಅವರು 15 ಲಕ್ಷ ರೂಪಾಯಿಗಳನ್ನು ಇಟ್ಟರೂ. ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಮತ್ತು ಲೆಟರ್ ಆಫ್ ಇಂಡೆಂಟ್ ಸಿಗುತ್ತದೆ. ನಮ್ಮಲ್ಲಿ 1 ಕೋಟಿ ರೂಪಾಯಿಗಳು ಇಟ್ಟುಕೊಂಡರೂ ನಮಗೆ ಲೈಸೆನ್ಸ್ ಸಿಗುವುದಿಲ್ಲ, ಲೆಟರ್ ಆಫ್ ಇಂಡೆಂಟ್ ಸಿಗುವುದಿಲ್ಲ, ಸಾಲ ಮಂಜೂರು ಆಗುವುದಿಲ್ಲ. ಮೊಟ್ಟಮೊದಲು ನಮ್ಮ ಸರ್ಕಾರದವರು ಕೊಡತಕ್ಕಂಥ ಪಾಲು ಕೊಡುವುದಕ್ಕೆ ತಯಾರು ಇಲ್ಲ. ಬಜೆಟ್ ಪ್ರಾವಿಜನ್ ಮಾಡಿಕೊಳ್ಳುವುದಕ್ಕೆ ಸರ್ಕಾರಕ್ಕೆ ಇವತ್ತಿನವರೆಗೂ ಸಾಧ್ಯವಾಗಿಲ್ಲ. ಮೊಟ್ಟಮೊದಲು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಳ್ಳುವುದಕ್ಕೆ ಸರ್ಕಾರಕ್ಕೆ ಇವತ್ತಿನವರೆಗೂ ಸಾಧ್ಯವಾಗಿಲ್ಲ. ಮೊಟ್ಟಮೊದಲು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಳ್ಳಬೇಕು. ಅವರು 57ಪರ್ಸೆಂಟ್ ಕೊಡುವುದಕ್ಕೆ ತಯಾರಾಗಿದ್ದಾರೆ. 4ನೇ ಹಂತದಲ್ಲಿ ಬರತಕ್ಕಂಥ ಯೋಜನೆಗಳು ಯಾವುವೂ ಇಲ್ಲ. ಈಗ ಏನು 3ನೇ ಹಂತದಲ್ಲಿ ನಡೆಯುತ್ತಿವೆ ಅವು ಮಾತ್ರ ಇವೆ. 4ನೇ ಹಂತದಲ್ಲಿ ಯೋಜನೆಗಳು ಬರಬೇಕಾದರೆ ಕೇಂದ್ರ ಸರ್ಕಾರದ ಜೊತೆ ಮುತುವರ್ಜಿ ವಹಿಸಿ ತಾವು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕಾಗುತ್ತದೆ. ಆಗ ಮಾತ್ರ ಸಹಕಾರ ಸಂಘಗಳು ಬರುತ್ತವೆ. ಇಲ್ಲದಿದ್ದರೆ ಸಕ್ಕರೆ ಕಾರ್ಖಾನೆಗಳು ನೂಲಿನ ಗಿರಣಿಗಳು ಯಾವುವೂ ಇಲ್ಲ. ಮಹಾರಾಷ್ಟ್ರದಲ್ಲಿ 60–70 ಸಕ್ಕರೆ ಕಾರ್ಖಾನೆಗಳು ಇದ್ದರೆ ನಮ್ಮಲ್ಲಿ ಬರೀ 16 ಸಕ್ಕರೆ ಕಾರ್ಖಾನೆಗಳು ಇವೆ. 3–4 ಸಕ್ಕರೆ ಕಾರ್ಖಾನೆಗಳು 3 ವರ್ಷಗಳಿಂದ ಬರಬೇಕಾಗಿದೆ. ದಯಮಾಡಿ ತಾವು ಬಜೆಟ್‌ನಲ್ಲಿ ಹಾಕಿಕೊಳ್ಳುತ್ತೇವೆ ಎಂದು ಖಚಿತವಾಗಿ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ ಅವರಿಗೆಲ್ಲಾ ಗೊತ್ತಿದೆ. ಅವರು ಎರಡು ಕೋ ಆಪರೇಟಿವ್ ಇನ್‌ಸ್ಟಿಟ್ಯೂಶನ್ಸ್‌ಗೆ ಅಧ್ಯಕ್ಷರು. ಅಪೆಕ್ಸ್ ಬ್ಯಾಂಕ್ ಮತ್ತು ಮಾರ್ಕೆಟಿಂಗ್ ಫೆಡರೇಶನ್‌ಗೆ. ನಾವು ಹಣ ಕೊಟ್ಟಿಲ್ಲವೆಂದು ಅಲ್ಲ. ಕೆಲವು ಕಡೆ ಕೊಟ್ಟಿದ್ದೇವೆ. ಉದಾಹರಣೆಗೆ ನಾರಂಜ ಶುಗರ್ ಫ್ಯಾಕ್ಟರಿಗೆ ಸುಮಾರು 9 ಕೋಟಿ 10 ಲಕ್ಷ ಕೊಟ್ಟಿದ್ದೇವೆ. ನಾವು ಏನು ಕೊಡಬೇಕಾಗಿತ್ತು ಅದಕ್ಕಿಂತ ಹೆಚ್ಚಿನ ಹಣ ಕೊಟ್ಟಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– 2 ಕೋಟಿ ವಾಪಸ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಆ ಹಣ ಮತ್ತೆ ವಾಪಸ್ ಬರುತ್ತದೆ. ನಾವು ಎಷ್ಟು ಹಣ ಕೊಟ್ಟರೂ ಎನ್.ಸಿ.ಡಿ.ಸಿ.ಯವರು ಕೊಟ್ಟಿಲ್ಲ. ಉಳಿಕೆ ಕೃಷ್ಣಾ ಸಕ್ಕರೆ ಕಾರ್ಖಾನೆಗೆ 3 ಕೋಟಿ 54 ಲಕ್ಷ ರೂಪಾಯಿಗಳಿಗೂ ಮೇಲೆ ಕೊಟ್ಟಿದ್ದೇವೆ. ನಮ್ಮ ಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆ, ಖಾನಾಪುರ, ಅದಕ್ಕೆ 4 ಕೋಟಿ ಕೊಟ್ಟಿದ್ದೇವೆ. ಹಣ ಕೊಟ್ಟಿಲ್ಲವೆಂದು ಅಲ್ಲ. ಆದರೆ ನೂಲಿನ ಗಿರಣಿಗಳ ಬಗ್ಗೆ ಬಜೆಟ್

ಪ್ರಾವಿಜನ್ ಮಾಡಿಕೊಳ್ಳಬೇಕಾಗಿತ್ತು ಆಗಿಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಮಾನ್ಯ ದೇಶಪಾಂಡೆಯವರು ಹೇಳಿದಂತೆ ಯಾವುದೇ ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ ನಾವು ಕೂಡ ಬಜೆಟ್ ಪ್ರಾವಿಷನ್ ಮಾಡಿ ಆಮೇಲೆ ಕೇಳತಕ್ಕಂಥಾದ್ದು ಅವಶ್ಯಕ ಇದೆ ಒಪ್ಪಿಕೊಳ್ಳುತ್ತೇನೆ. ನಾನೂ ಸಹ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಈಗ ಗೋಡೌನ್ಸ್ ಮಾಡಿದ್ದಾರೆ. ಅದಕ್ಕೆ 40 ಪರ್ಸೆಂಟ್ ಹಣ ಕೊಡಬೇಕಾಗಿತ್ತು. ಆ ಹಣವನ್ನು ಬಿಡುಗಡೆ ಮಾಡಿಲ್ಲ. ಗೋಡೌನ್ಸ್ ಕಟ್ಟಲಿಕ್ಕೆ ರಾಜ್ಯ ಸರ್ಕಾರದವರಿಗೆ ಎನ್.ಸಿ.ಡಿ.ಸಿ.ಗೆ ಹಣ ಕೊಟ್ಟರೆ, ತಾವು ಹಣ ಕೊಟ್ಟಿಲ್ಲ.

ಶ್ರೀ ಎ.ಬಿ. ಜಕನೂರ್:– ಮಾನ್ಯ ಸಹಕಾರ ಮಂತ್ರಿಯವರು ಹೇಳಿದರು, ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ವ್ಯವಸ್ಥೆ ಮಾಡುತ್ತೇನೆಂದು. ಹಾಗೇ ಯಾವ ಯಾವ ಸ್ಪಿನ್ನಿಂಗ್ ಮಿಲ್‌ಗಳು ಸ್ಯಾಂಕ್ಷನ್ ಆಗಿವೆ ? ಯಾವ ಯಾವ ಶುಗರ್ ಫ್ಯಾಕ್ಟರಿಗೆ ಲೈಸೆನ್ಸ್ ಸಿಕ್ಕಿವೆ ? ಇವುಗಳಿಗೆ ರಾಜ್ಯ ಸರ್ಕಾರದಿಂದ ಕೊಡತಕ್ಕಂಥ ವಂತಿಕೆ ಹಣದ ಬಗ್ಗೆ ಈ ವರ್ಷ ಬಜೆಟ್‌ನಲ್ಲಿ ಪ್ರಾವಿಷನ್ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರೇನು ನಮಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನಾನು ಈಗಲೇ ಹೇಳಿದೆ, ಅದಕ್ಕೆ ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡಿ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ನಾನು ಇಲ್ಲವೆಂದು ಹೇಳಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಪ್ರಶ್ನೆ ಪ್ರಾರಂಭದಿಂದ ನಾನು ಇರಲಿಲ್ಲ. ನಡುವೆ ಬಂದೆ. ಆಗ ನಾಮಕರಣದ ಬಗ್ಗೆ ಮಾತನಾಡುತ್ತಿದ್ದರು, ನೀವೂ ಮಾಡಿದ್ದೀರಿ ನಾವೂ ಮಾಡಿದ್ದೇವೆಂದು ಏನೋ ಸಚಿವರು ಹೇಳಿದರಂತೆ. ಸಹಕಾರಿ ರಂಗದಲ್ಲಿ ಆಯ್ಕೆಯಾದ ಸದಸ್ಯರ ಸಂಖ್ಯೆಗಿಂತ ಹೆಚ್ಚಾಗಿ ನಾಮಕರಣ ಸದಸ್ಯರನ್ನು ಮಾಡುವಂಥ ಅವಕಾಶ ಇದೆ. ಇದಕ್ಕೆ ಚುನಾವಣೆ ಏಕೆ ಬೇಕೆಂದು ನಿಮ್ಮನ್ನು ಕೇಳುತ್ತಿದ್ದೇನೆ. ಚುನಾವಣೆ ಮಾಡುವುದು ಬೇಡ, ಸುಮ್ಮನೆ ನಾಮಕರಣ ಮಾಡಿಕೊಂಡು ಸಹಕಾರ ಚಳುವಳಿಯನ್ನು ಮಾಡುವುದಾದರೆ ತಾವು ಮುಂದುವರಿಸಬಹುದು. ಉದಾಹರಣೆಗೆ ಹೇಳುತ್ತೇನೆ, ಮಾನ್ಯ ಸಭಾಧ್ಯಕ್ಷಿಣಿಯವರೆ, ಮೊನ್ನೆ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಒಂದು ಚುನಾವಣೆ ಆಯಿತು. ರೈತರ ಪರವಾಗಿ ಇದ್ದಂಥ 9 ಸ್ಥಾನಗಳನ್ನು ಯಾವುದೋ ಒಂದು ಸಂಘದ ಅಭ್ಯರ್ಥಿಗಳು ಆಯ್ಕೆಯಾಗಿ ಪಡೆದರು. ಒಂಭತ್ತಕ್ಕೆ ಒಂಭತ್ತೂ ಅವರದೇ. ಈಗ ಇದರ ಆಡಳಿತ ಮಂಡಳಿ ಯಾರಿಂದ ರಚನೆಯಾಗಬೇಕು ? ಯಾರು ಈ ಸಹಕಾರಿ ಸಕ್ಕರೆ ಕಾರ್ಖಾನೆ ಆಡಳಿತ ನಡೆಸಬೇಕು ? ಪ್ರಜಾಪ್ರಭುತ್ವದ ಆಧಾರದ ಮೇಲೆ ಯಾರು ? ಅನಂತರ 10 ಜನರನ್ನು ಸರ್ಕಾರ ನಾಮಕರಣ ಮಾಡಿತು. ನಾನು ಉದಾಹರಣೆಗೆ ಹೇಳುತ್ತಿದ್ದೇನೆ. ಮಹಾರಾಷ್ಟ್ರದಲ್ಲಿ ಸಹಕಾರಿ ಚಳುವಳಿ ಯಶಸ್ವಿಯಾಗಿ ನಡೆಯುವುದಕ್ಕೆ ಕಾರಣ ಅಲ್ಲಿ ನಾಮಕರಣದ ಅವಕಾಶವೇ ಇಲ್ಲ ಸಹಕಾರಿ ಕಾಯಿದೆಯಲ್ಲಿ. ಮತ್ತೆ ನಮ್ಮ ಸಹಕಾರ ಸಚಿವರು ಕೇಂದ್ರ ಸರ್ಕಾರ ಏನು ಯಾವ ಪಕ್ಷದ ಆಡಳಿತ ಇದೆ ?

ಉಪಾಧ್ಯಕ್ಷಿಣಿಯವರು:– ಪ್ರಶ್ನೆ ಕೇಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇದು ಮುಖ್ಯವಾದ ಪ್ರಶ್ನೆ. ಇಲ್ಲಿ ನಾವು ಸಹಕಾರಿ ಚಳುವಳಿಯನ್ನು ಪ್ರಜಾಪ್ರಭುತ್ವದ ಆಧಾರದ ಮೇಲೆ ಮಾಡುತ್ತೇವೋ ಅಥವಾ ಏನು ಎಂದು ? ಕೇಂದ್ರದ ಸಚಿವರು ಹೇಳುತ್ತಾರೆ. ಸರ್ಕಾರದ ಹಸ್ತಕ್ಷೇಪ ಸಂಪೂರ್ಣ ನಿರ್ಮೂಲನ ಮಾಡುವಂಥ ತಿದ್ದುಪಡಿಯನ್ನು ನಾವು ಇಷ್ಟರಲ್ಲೇ ತರುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಆ ದಿಕ್ಕಿನಲ್ಲಿ ಏನಾದರೂ

ನಮ್ಮ ಸರ್ಕಾರವು ದಿಕ್ಕೂಚಿ ಹಿಡಿದು ಕೆಲಸ ಮಾಡುತ್ತದೆಯೇ ಅಥವಾ ಇಲ್ಲವೆ ? ಸರ್ಕಾರಿ ನಾಮಕರಣ ಸದಸ್ಯರ ಮೂಲಕ ಸಹಕಾರಿ ಚಳುವಳಿ ಮುಂದುವರಿಸುತ್ತದೆಯೇ ? ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಇದಕ್ಕೆ ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

## ರಾಜ್ಯದಲ್ಲಿ ಸಹಕಾರಿ ಸಮುದಾಯ ಬೇಸಾಯ ಸಂಘಗಳ ಸಂಖ್ಯೆ

**63.** ಶ್ರೀ ಇಳ್ಕಲ್ ವಿಜಯಕುಮಾರ (ಹೊಸದುರ್ಗ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಮುದಾಯ ಬೇಸಾಯ ಸಹಕಾರ ಸಂಘಗಳ ಸಂಖ್ಯೆ ಎಷ್ಟು ?

ಆ) ಸದರಿ ಸಂಘಗಳು ಕಾರ್ಯ ತತ್ಪರವಾಗಿವೆಯೇ ?

ಇ) ಹಾಗಿದ್ದಲ್ಲಿ, ಹೊಸದುರ್ಗ ತಾಲ್ಲೂಕಿನ ಮಧುರೆ ಕಣಿವೆ ಸಮುದಾಯ ಬೇಸಾಯ ಸಹಕಾರ ಸಂಘ ಕಾರ್ಯ ನಿರ್ವಹಿಸುತ್ತಿದೆಯೇ ?

ಈ) ಸದರಿ ಸಂಘಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಂಘದ ಸದಸ್ಯತ್ವ ನೀಡಲು ಇರುವ ತೊಂದರೆಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) 673.

ಆ) 1. ಕಾರ್ಯ ನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ – 236.

2. ಕಾರ್ಯ ತಟಸ್ಥವಾಗಿರುವ ಸಂಘಗಳ ಸಂಖ್ಯೆ – 241.

3. ಸಮಾಪನಗೊಂಡಿರುವ ಸಂಘಗಳ ಸಂಖ್ಯೆ – 196.

ಇ) ಹೌದು.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಸದಸ್ಯತ್ವ ನೀಡಲು ತೊಂದರೆಗಳ್ಯಾವೂ ಕಂಡು ಬಂದಿಲ್ಲ.

ಶ್ರೀ ಇಳ್ಕಲ್ ವಿಜಯಕುಮಾರ್:- ಮಾನ್ಯ ಸಭಾಧ್ಯಕ್ಷೀಣಿಯವರೆ, ಈ ಸೊಸೈಟಿ ಒಂದು ಮನೆತನದ ಸೊಸೈಟಿ ಆಗಿದೆ. ಇದು ಸುಮಾರು 1964ನೇ ಇಸವಿಯಲ್ಲಿ ಕೊಟ್ಟಂಥ ಸೊಸೈಟಿ. ಇದಕ್ಕೆ 5 ನೂರು ಎಕರೆ ಜಮೀನನ್ನು ಸರ್ಕಾರ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದೆ. ಇದು ಪ್ರತಿ ವರ್ಷವೂ ಲುಕ್ಸಾನಿನಲ್ಲಿ ನಡೆಯುತ್ತಿದೆ. ಲೆಕ್ಕಪತ್ರ ಕೂಡ ಸರಿಯಾಗಿಟ್ಟಿಲ್ಲ. 68 ಸದಸ್ಯರಲ್ಲಿ ಅರ್ಧದಷ್ಟು ಜನ ಊರು ಬಿಟ್ಟುಹೋಗಿದ್ದಾರೆ. ಕೆಲವರು ಸತ್ತು ಹೋಗಿದ್ದಾರೆ. ಆದರೂ ಕೂಡ ಈ ಸೊಸೈಟಿಗೆ ಇಷ್ಟೊಂದು ಜಮೀನು ಕೊಡತಕ್ಕಂಥ ಅವಶ್ಯಕತೆ ಇದೆಯೇ ? ಈ ಜಮೀನನ್ನು ಸರ್ಕಾರ ವಹಿಸಿಕೊಂಡು ಬಡಬಗ್ಗರಿಗೆ ಹಂಚಲಿಕ್ಕೆ ಏನಾದರೂ ತೊಂದರೆ ಇದೆಯೇ ಎಂದು ದಯವಿಟ್ಟು ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ನನ್ನ ಗಮನಕ್ಕೆ ತಂದಿದ್ದಾರೆ. ಮತ್ತು ನಾನು ಕೂಡ ಇದರ ಬಗ್ಗೆ ವಿವರಣೆಯನ್ನು ತರಿಸಿಕೊಂಡು ನೋಡಿದಾಗ ಈ ಸೊಸೈಟಿ ಏನೂ ಲಾಭದಲ್ಲಿ ಇಲ್ಲ. ಸುಮಾರು 25 ವರ್ಷಗಳ ಲೆಕ್ಕಪತ್ರವನ್ನು ನೋಡಿದರೆ ಆ ಸೊಸೈಟಿಯಿಂದ ಏನೂ ಲಾಭವಾಗಿಲ್ಲ